ಸಿಹಿನೀರೋ ಸುರೆಯೋ ನೀರೋ ತಿಳಿಯಲಿಲ್ಲ. ಸುಡ್ಲಿ ತಿಳಿಯಂಗಿಲ್ಲ. 'ಸ್ವಾತಿ ಮಳಿ ನೀರ ಕುಡಿದ್ರ ವಾತೆಲ್ಲ ಮಂಗಮಾಯ ಅಂತ ನಾ ತುಂಬಿಸಿಟ್ರ, ಮೂರ ದಿನಕ್ಕ ಹುಳಾ ಬೀಳು ನೀರು ಹಿಡಿದು ಇಟ್ಟಿಯಲ್ಲ...! ಹಿಂಗ ಓದಿ...!' ಅಂದ್ರು. ಬಹುಶಃ ನಾನೋದಿದ ಪಾಠದಲ್ಲಿ ಸ್ವಾತಿ ನೀರು ಮುತ್ತಾಗುವುದು ಗೊತ್ತಿತ್ತು. ಬ್ಯಾನಿಗೂ ಮದ್ದಾಗೋದು ಆವತ್ತೇ ತಿಳಿದದ್ದು. ಮಳೆ ದೆಸೆಯಿಂದ ಹೊಸ ಪಾಠ ಕಲಿತೆನೆನ್ನಿ.

ಮಳೆ ಹನಿಸದ ದಿನವದು ಕಣ್ಣೊಳಗೆ ಹನಿಯಿತ್ತು. ನನ್ನವನು ಕಣ್ಣು ಮುಚ್ಚಿದ್ದ. ದೇಹದ ಎಲ್ಲಾ ಬಾಧೆಗೂ ತಿಲಾಂಜಲಿ ಇಟ್ಟಿದ್ದ. ಕೈ ಹಿಡಿದು ಕರೆತಂದಿದ್ದವನಿಗೆ ಸುಗಂಧ ದ್ರವ್ಯವೆಂದರೆ ಜೀವ. ತವರುಮನೆಯ ದಾರಿಯಲ್ಲಿ ಅವ ಬರುವ ಸುದ್ದಿಯನ್ನು ಕೊಟ್ಟಿದ್ದೇ ಅತ್ತರೆಣ್ಣೆ. ವಿಚಿತ್ರ ಬಣ್ಣಬಣ್ಣದ ಬಾಟಲಿಗಳನ್ನು ಸಾಲಾಗಿಟ್ಟಿರುತ್ತಿದ್ದ. ಅದಕ್ಕೆ ಅವನಿಷ್ಟದ ಸುಗಂಧ ದ್ರವ್ಯ ಸಿಂಪಡಿಸಿ ವಿದಾಯ ಹೇಳಬೇಕೆಂದೆ. ಮನೆ ತುಂಬಾ ಹುಡುಕಾಡತೊಡಗಿದೆ. ಏನು? ಎಂದಳು ಅಮ್ಮ. ಸೇಂಟು ಎಂದೆ. ಸಂಕಟ ಇಲ್ಲ...! ಸುಮ್ಮನೇ ಬಾ..! ಎಂದಳು ಕಣ್ಣಸನ್ನೆಯಲ್ಲಿ. ಒಳಗೊಳಗೆ ಸಮಾಧಾನವಿಲ್ಲ. ಅವನು ಚಟ್ಟದಲ್ಲಿದ್ದ. ನಾನು ಮೆಟ್ಟಿಲಲ್ಲಿ. ಎಳ್ಳುನೀರು ಬಿಡಲು ಕರೆದರು. ಸಮಾಧಾನವಿಲ್ಲ. ಗಾಂದೆಣ್ಣೆ ಹಾಕಿ ವಿದಾಯ ಹೇಳಬೇಕಿತ್ತು ಎನಿಸಿತು. ಅಂಗಳದಲ್ಲಿ ಟಪ್ ಟಪ್. ಮಳೆ ಬರುವ ಮುನ್ಸೂಚನೆ. ಒಂದೊಂದೇ ಹನಿ ಮೊದಲಾಯಿತು. ಮಣ್ಣಿನೊಂದಿಗೆ ಹನಿಯ ಮಿಲನ. ಘಮ್ಮೆನ್ನುವ ಪರಿಮಳ. ಇದು ಒರಿಜಿನಲ್. ನಾನು ಹುಡುಕಿದ್ದು ಡೂಪ್ಲಿಕೇಟ್. ಸಾವಿನ ಸನ್ನಿಧಾನದಲ್ಲೂ ಪುಳಕಗೊಂಡೆ. ಆದರೂ ಭಯವಾಯಿತು. 'ಬಿಡದೇ ಸುರಿವ ಮಳೆಗೆ ಮಣ ಭಾರವಾಗದಿರಲಿ ಹಗುರ ಎದೆಯವನು' ಮನದಲ್ಲಿಯೇ ಬೇಡಿದೆ. 'ಬಾ ಮಳೆಯೇ ಬಾ, ಅಷ್ಟು ಬಿರುಸಾಗಿ ಸುರಿಯದಿರು ನನ್ನ ನಲ್ಲೆ ಬರಲಾರದಂತೆ' ಎಂಬ ಕವಿತೆ ನೆನಪಾಯಿತು. ಮಳೆ ಕರೆದವರು ಕವಿ. ಅದರೆ ನಾನು, 'ನಿಲ್ಲು ಮಳೆಯೇ ನಿಲ್ಲು ನನ್ನ ನಲ್ಲ ನೆನೆಯದಂತೆ ಬಿರುಸಾಗಿ ಸುರಿಯದಿರು' ಎಂದೆ ಒಳಗೊಳಗೆ. ಮಳೆಯೂ ಹೆಣ್ಣಲ್ಲವೇ? ಕರುಳುನೋಡಿ. ಹೆಬ್ಬಂಡೆಯಂಥ ಮೋಡ ಬಯಲಾಯಿತು. ಎದೆಯೊಳಗಿನ ಮಳೆ ಮಾತ್ರ ಹನಿಸುತ್ತಲೇ ಇತ್ತು.

ಈಗ ಮಳೆಯಲ್ಲಿ ನೆನೆಯುವ ವಯಸ್ಸು ಅಲ್ಲದಿದ್ದರೂ ಮಳೆ ನಿಂತರೂ ಸುರಿದ ನೆನಪಿನ ಹನಿಗಳು ಕಾಡುತ್ತಲೇ ಇವೆ, ದೇವರ ನಾಡನ್ನು ನೆಲಸಮ ಮಾಡಿದ್ದು, ಬಸುರಿ ಹೆಂಡತಿ ಕುಸಿದ ಗುಡ್ಡದಡಿ ಉಸಿರು ಚೆಲ್ಲಿದ್ದು, ಮನೆ, ಹೊಲಗದ್ದೆಗಳನ್ನು ಕಳೆದುಕೊಂಡು ಸುರಿವ ಮಳೆಯಲ್ಲಿ ತೊಯ್ದು ನಿಂತವರನ್ನೂ ಕನಿಕರಿಸದೇ ಪ್ರವಾಹ ಅಪ್ಪಳಿಸಿದ್ದು, ಕಂದಮ್ಮಗಳನ್ನು ತಂದೆ-ತಾಯಿಗಳನ್ನು ಅಗಲಿಸಿದ್ದು, ಸಾಕಿದ ಕುರಿಗಳೆಲ್ಲಾ ಮಳೆಗೆ ಅಂಗಾತ ಅವಡುಕಚ್ಚಿದಾಗ ಕುರಿಕಾಯುವ ಸಹೋದರ ಆದಪ್ಪ ದವಡಿ ಕಚ್ಚಿ ಹೊರಳಾಡಿದ್ದು, ಬೆಳೆದ ಬೆಳೆ ಕೈಗೆ ಸಿಗದೇ ಯಂಕಪ್ಪಣ್ಣ ಕಣ್ಣೀರು ಸುರಿಸಿದ್ದು ಜೀವ ಹಿಂಡುವಾಗ, ದರ್ದಿಲ್ಲದೇ ಸುರಿವ ಮಳೆಗೆ ಮದ್ದು ಮರ ನೆಡುವುದರಲ್ಲಿದೆ, ಗುಡ್ಡ ಅಗಿಯುವುದರಲ್ಲಿಲ್ಲ ಎಂದು ಯಾರಿಗೆ ಹೇಳುವುದು?

ಕಷ್ಟಕ್ಕೂ, ಕನಸಿಗೂ ಜೊತೆಯಾದ ಮಳೆ ನಿಂತ ಮೇಲೂ ಹನಿ ನಿಂತಿಲ್ಲ. ಮಳೆಯಲ್ಲಿ ನೆನಯಬಾರದೆಂದೇ ನನ್ನವನು ಗುಲಾಬಿ ಕೊಡೆ ಉಡುಗೊರೆ ಕೊಟ್ಟಿದ್ದು, ಮಳೆಯಲ್ಲಿ ಬಣ್ಣಬಣ್ಣದ ಛತ್ರಿ ಹಿಡಿದು ಡೌಲು ಮಾಡಿದ್ದು, ಅಂಗಳ ತುಂಬಿದ ಮಳೆನೀರಲ್ಲಿ ತೇಲುವ ಕಾಗದದ ದೋಣಿ ಬಿಟ್ಟಿದ್ದು, ಮಳೆಯ ರಭಸದಲ್ಲಿ ಕೊಚ್ಚಿಹೋದ ಬೆಳ್ಳಿ ಕಾಲುಗೆಜ್ಜೆ ಕಳೆದುಕೊಂಡು ಏಟು ತಿಂದದ್ದು, ಹೊಲ ಕಾಯುವ ಅಜ್ಜಿಗೆ ಗೋಣಿ ಚೀಲ ಕೊಡಲು ಹೋಗಿ ನಾನೇ ನೆನೆದದ್ದು. ಸೋರುವ ಮಳೆಗೆ ಇಡೀ ಮನೆಯಲ್ಲಿ ಎಲ್ಲೆಂದರಲ್ಲಿ ಬೋಗುಣಿ, ಬಕೀಟು ಇಟ್ಟು ತೊಯ್ದದ್ದು, ನೆಲದಲ್ಲಿಯೇ ರಾತ್ರಿ ಒದ್ದೆಯಾಗಿ ಮಲಗಿದ್ದು. ಮಣ್ಣಿನಮನೆ ಸೋರಬಾರದೆಂದು ಮ್ಯಾಳಿಗಿಗೆ ಕರ್ಲು ಹಾಕಿಸಿದ್ದು, ಬೆಳಕಂಡಿ ಹಾಕಲು ಹೋದಾಗ ಏರುವ ನಿಚ್ಚಣಿಕೆ ಹಲ್ಲೇ ಮುರಿದು ಹಲ್ಲೇ ಮುರಿದುಕೊಂಡಿದ್ದು, ಎಲ್ಲವೂ ನೆನೆಸಿದೆ. ಯು.ಆರ್. ಅನಂತಮೂರ್ತಿಯವರ ಸಾಲುಗಳಂತೆ 'ಮತ್ತೆ ಮತ್ತೆ ಮಳೆ ಹೊಯ್ಯುತಿದೆ., ಎಲ್ಲ ನೆನಪಾಗುತಿದೆ'. ಜಡವಾದ ಜೀವ ಅರಳಿಸಲು 'ಮಾಯದಂತ ಮಳೆ'ಯ ಹಾಡು-ಪಾಡು ಎದೆ ತೋಯಿಸಿದೆ. ●